**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೦೬.೦೯.೨೦೧೮ ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೨೪ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ 24ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಸೆಪ್ಟೆಂಬರ್ 06, 2018ರ ಗುರುವಾರ ಅಪರಾಹ್ನ 3.00** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ವಿದ್ವಾನ್ ನರಸಿಂಹ ಭಟ್ಟ,** ಪ್ರಾಚಾರ್ಯರು, ಸೋಂದಾ | ಸದಸ್ಯರು |
| ೩. | **ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ,** ಪ್ರಾಚಾರ್ಯರು, ಧಾರವಾಡ | ಸದಸ್ಯರು |
| ೪. | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ | ಸದಸ್ಯರು |
| ೫. | **ಡಾ. ಬಿ.ವಿ ವೆಂಕಟರಮಣ,** ಡೀನ್, ಶಾಸ್ತ್ರ ನಿಕಾಯ | ಸದಸ್ಯರು |
| ೬. | **ಡಾ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೭. | **ಶ್ರೀಮತಿ ಎಂ. ಶಿಲ್ಪ,** ಕ.ಆ.ಸೇ., ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ವಿದ್ವಾನ್ ರಾಮಚಂದ್ರ ನಾ. ಭಟ್ಟ,** ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೭. | **ಡಾ. ಎಸ್.ಎನ್. ಸಂಪತ್ಕುಮಾರ್,** ಪ್ರಾಚಾರ್ಯರು(ಪ್ರ), ಬೆಂಗಳೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | | ವಿಷಯ, ಟಿಪ್ಪಣಿ ಮತ್ತು ನಿರ್ಣಯ |
|---|---|---|
| ವಿಷಯ 01 | **ವಿಷಯ ಮತ್ತು ಟಿಪ್ಪಣಿ** | **ವ್ಯಾಕರಣ ಪಾಠ್ಯಕ್ರಮವನ್ನು ಅನುಮೋದಿಸುವ ಮಾಡುವ ಬಗೆಗೆ**<br>21ನೆಯ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ ವ್ಯಾಕರಣ ವಿಭಾಗವನ್ನು ತೆರೆಯಲು ಅನುಮೋದನೆ ನೀಡಲಾದ ಹಿನ್ನೆಲೆಯಲ್ಲಿ, ದಿನಾಂಕ 05.07.2018ರಂದು ವ್ಯಾಕರಣ ಅಧ್ಯಯನ ಮಂಡಳಿಯನ್ನು ಕರೆದು ಪಾಠ್ಯಕ್ರಮವನ್ನು ರಚಿಸಲಾಗಿದೆ. ಪಾಠ್ಯಕ್ರಮವನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವ್ಯಾಕರಣ ಪಾಠ್ಯಕ್ರಮವನ್ನು ತಾತ್ವಿಕವಾಗಿ ಒಪ್ಪಿದೆ. ವಿಶ್ವವಿದ್ಯಾಲಯದಲ್ಲಿರುವ ಇತರೆ ವಿಭಾಗಗಳಂತೆ ಪಠ್ಯಕ್ರಮವನ್ನು ಕ್ರಮಾನುಗತಗೊಳಿಸುವಂತೆ ಸೂಚಿಸಲು ಸಭೆ ನಿರ್ಣಯಿಸಿತು.** |
| ವಿಷಯ 02 | **ವಿಷಯ ಮತ್ತು ಟಿಪ್ಪಣಿ** | **ಪಿಎಚ್.ಡಿ–ವಿದ್ಯಾವಾರಿಧಿ ತರಗತಿಗಳಲ್ಲಿ ಪ್ರವೇಶಾತಿ ಪಡೆಯುವ ವಿದೇಶೀ ವಿದ್ಯಾರ್ಥಿಗಳಿಗೆ ಶುಲ್ಕ ನಿಗದಿ ಮಾಡುವ ಬಗೆಗೆ**<br>ಪಿಎಚ್.ಡಿ–ವಿದ್ಯಾವಾರಿಧಿ ವಿದ್ಯಾರ್ಥಿಗಳಿಗೆ ಈ ಕೆಳಕಂಡಂತೆ ಶುಲ್ಕವನ್ನು ನಿಗದಿಪಡಿಸಲಾಗಿದೆ. ಸರ್ಕಾರದ ನಿಯಮಗಳಂತೆ ಮೀಸಲಾತಿ ಸೌಲಭ್ಯ ಹೊಂದಿರುವ ಅಭ್ಯರ್ಥಿಗಳಿಗೆ 50% ರಷ್ಟು ಶುಲ್ಕ ವಿನಾಯಿತಿ ಇರುತ್ತದೆ. |

| ಕ್ರಸಂ. | ಶುಲ್ಕವಿವರ | ಮೊತ್ತ |
|---|---|---|
| 01 | ಅರ್ಜಿ ಮತ್ತು ಪ್ರವೇಶ ಪರೀಕ್ಷಾ ಶುಲ್ಕ | **500.00** |
| 02 | ಅರ್ಜಿ ಶುಲ್ಕ (ಪ್ರವೇಶ ಪರೀಕ್ಷೆ ವಿನಾಯಿತಿ ಇರುವವರಿಗೆ) | **300.00** |
| 03 | ನೋಂದಣಿ ಶುಲ್ಕ | **5000.00** |
| 04 | ಬೋಧನಾ (ಕೋರ್ಸ್‌ವರ್ಕ್) ಶುಲ್ಕ | **3000.00** |

<table>
<tr><td></td><td></td><td>
<table>
<tr><td>05</td><td>ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕ</td><td>1000.00</td></tr>
<tr><td>06</td><td>ಪುನರ್ ಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ)</td><td>1000.00</td></tr>
<tr><td>07</td><td>ಕೋರ್ಸ್‌ವರ್ಕ್ ನಂತರ ವಾರ್ಷಿಕ ಶುಲ್ಕ (ಪ್ರತಿ ವರ್ಷ)</td><td>5000.00</td></tr>
<tr><td>08</td><td>ಗ್ರಂಥಾಲಯ ಶುಲ್ಕ (ಪ್ರತಿ ವರ್ಷ)</td><td>500.00</td></tr>
<tr><td>09</td><td>ಶೋಧ ಪ್ರಬಂಧ ಸಮರ್ಪಣೆ & ಪರೀಕ್ಷಾ ಶುಲ್ಕ</td><td>8000.00</td></tr>
<tr><td>10</td><td>ಘಟಿಕೋತ್ಸವ ಪ್ರಮಾಣಪತ್ರ (ಕನ್ನಡ ಮತ್ತು ಇಂಗ್ಲಿಷ್)</td><td>1000.00</td></tr>
<tr><td>11</td><td>ಪ್ರಬಂಧ ಪ್ರಕಟಣೆಗೆ ಅನುಮತಿ ಶುಲ್ಕ</td><td>2500.00</td></tr>
</table>
ವಿದೇಶೀ ವಿದ್ಯಾರ್ಥಿಗಳು ಪ್ರವೇಶವನ್ನು ಬಯಸಿ ಬರುತ್ತಿರುವ ಹಿನ್ನೆಲೆಯಲ್ಲಿ ವಿದೇಶೀ ವಿದ್ಯಾರ್ಥಿಗಳಿಗೆ ನಿಗದಿಪಡಿಸಬಹುದಾದ ಮೊತ್ತವನ್ನು ಕೋರಿ ಸಭೆಯಲ್ಲಿ ಮಂಡಿಸಿದೆ.</td></tr>
<tr><td></td><td>ನಿರ್ಣಯ</td><td>ವಿದ್ಯಾರ್ಥಿಗಳಿಗೆ ಹೊರೆಯಾಗದಂತೆ ಇತರೆ ವಿಶ್ವವಿದ್ಯಾಲಯಗಳ ಶುಲ್ಕವನ್ನು ಗಮನಿಸಿ ಸಿಂಡಿಕೇಟ್‌ಗೆ ಇಡುವುದು.</td></tr>
<tr><td>ವಿಷಯ 03</td><td>ವಿಷಯ ಮತ್ತು ಟಿಪ್ಪಣಿ</td><td>ಸಂಸ್ಕೃತ ಸಂಜೆ ಕೋರ್ಸ್‌ಗಳ ಬಗೆಗೆ<br>ರಾಷ್ಟ್ರೀಯ ಸಂಸ್ಕೃತ ಸಂಸ್ಥಾನವು ಅಷ್ಟಾದಶಿ ಯೋಜನೆಯಡಿ ಸಂಸ್ಕೃತ ಸಂಜೆ ಕೋರ್ಸ್‌ಗಳನ್ನು ಪ್ರಾರಂಭಿಸಲು ದಿನಾಂಕ: 03.07.2018ರಂದು ಅನುಮತಿಯನ್ನು ನೀಡಿ ಪತ್ರಿಸಿದೆ. ಹಾಗೂ 3 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಮೂರು ವರ್ಷಗಳ ಅವಧಿಯಲ್ಲಿ ಸಂಸ್ಕೃತ ಸರ್ಟಿಫಿಕೇಟ್ ಹಾಗೂ ಸಂಸ್ಕೃತ ಡಿಪ್ಲೋಮಾ ತರಗತಿಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ದಿನಾಂಕ 27.08.18 ರಂದು ಸಂದರ್ಶನ ನಡೆಸಿ ವಿದ್ವಾನ್ ಸ್ವರ್ಣದತ್ತ ಬೆಹರ್ವಾಡೆ, ವಿದ್ವಾನ್ ಕೃಷ್ಣಪ್ರಸಾದ್ ಎನ್ನುವವರನ್ನು ಆಯ್ಕೆ ಮಾಡಿಕೊಂಡಿದ್ದು ಪ್ರವೇಶ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. ಈ ಕೋರ್ಸ್‌ಗಳಿಗೆ ವಿಶ್ವವಿದ್ಯಾಲಯದ 21ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ ಅನುಮತಿಸಲಾದ ಸಂಸ್ಕೃತ ಸರ್ಟಿಫಿಕೇಟ್ ಹಾಗೂ ಸಂಸ್ಕೃತ ಡಿಪ್ಲೋಮಾ ತರಗತಿಗಳ ಪಾಠ್ಯಕ್ರಮಗಳನ್ನೇ ಅಳವಡಿಸಲಾಗಿದೆ. ಈ ಸಂಬಂಧ ಸಭೆಯಲ್ಲಿ ಅನುಮತಿ ಕೋರಿದೆ.</td></tr>
<tr><td></td><td>ನಿರ್ಣಯ</td><td>ಸಂಸ್ಕೃತ ಸಂಜೆ ಕೋರ್ಸ್‌ನಲ್ಲಿ ಸಂಸ್ಕೃತ ಸರ್ಟಿಫಿಕೇಟ್ ಹಾಗೂ ಸಂಸ್ಕೃತ ಡಿಪ್ಲೋಮಾ ತರಗತಿಗಳ ಪಾಠ್ಯಕ್ರಮಗಳನ್ನು ಅಳವಡಿಸಲು ಸಭೆಯು ಅನುಮತಿಸಿದೆ.</td></tr>
<tr><td>ವಿಷಯ 04</td><td>ವಿಷಯ ಮತ್ತು ಟಿಪ್ಪಣಿ</td><td>ಪುನರಾವರ್ತಿತ ವಿದ್ಯಾರ್ಥಿಗಳಿಗೆ ಶ್ರೇಣಿ ನಿಗದಿ ಮಾಡುವ ಬಗೆಗೆ.<br>ಪುನರಾವರ್ತಿತ ವಿದ್ಯಾರ್ಥಿಗಳಿಗೆ ಯಾವುದೇ ಪ್ರಥಮಾ. ದ್ವಿತೀಯಾ, ವೈಶಿಷ್ಟ್ಯ ಮುಂತಾದ ಯಾವುದೇ ಶ್ರೇಣಿಯನ್ನು ನೀಡದಿರಲು ವಿಶ್ವವಿದ್ಯಾಲಯದ ಸ್ಥಾಯೀ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಆದರೆ ವಿದ್ಯಾರ್ಥಿಗಳು ನಿಗದಿಪಡಿಸಿದ ಅವಧಿಯ ಒಳಗಾಗಿ ಪದವಿಯ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾದಲ್ಲಿ ಅವರಿಗೆ ಶ್ರೇಣಿಯನ್ನು ನೀಡಬಹುದಾಗಿದ್ದು ಸಭೆಯ ಅನುಮೋದನೆಗೆ ಮಂಡಿಸಿದೆ.</td></tr>
<tr><td></td><td>ನಿರ್ಣಯ</td><td>ಪದವಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿದರೆ ಕ್ರೋಢೀಕೃತ ಅಂಕಪಟ್ಟಿಯಲ್ಲಿ ಶ್ರೇಣಿಯನ್ನು ನಮೂದಿಸಲು ಸಭೆಯು ಅನುಮತಿಸಿದೆ.</td></tr>
<tr><td>ವಿಷಯ 05</td><td>ವಿಷಯ ಮತ್ತು ಟಿಪ್ಪಣಿ</td><td>ಸಾಹಿತ್ಯ ಪರೀಕ್ಷೆಗಳನ್ನು ಪಿ.ಯು.ಸಿ ಪರೀಕ್ಷೆಗೆ ಸಮಾನಾಂತರದಲ್ಲಿ ಪರಿಗಣಿಸುವ ಬಗೆಗೆ.<br>1973ರ ಮೈಸೂರು ಸರಕಾರವು ಸಾಹಿತ್ಯ ಪರೀಕ್ಷೆಗಳನ್ನು ಪಿಯುಸಿ ಪರೀಕ್ಷೆಗೆ ಸಮಾನಾಂತರದಲ್ಲಿಯೂ ಮತ್ತು ಕಾವ್ಯ ಪರೀಕ್ಷೆಗಳನ್ನು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಸಮಾನಾಂತರದಲ್ಲಿಯೂ ಪರಿಗಣಿಸುವಂತೆ ಆದೇಶಿಸಿದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಯಾವುದೇ ಆದೇಶ ಇರುವುದಿಲ್ಲ. ಆದರೆ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣದ ಅನುಕೂಲಕ್ಕಾಗಿ ಮತ್ತು ವಿಶ್ವವಿದ್ಯಾಲಯದ ದಾಖಲಾತಿ ನಿಯಮಾವಳಿಗಳಿಗೆ ಅನುಕೂಲವಾಗುವಂತೆ ಆದೇಶ ನೀಡಬಹುದಾಗಿದ್ದು ಸಭೆಯ ಅನುಮೋದನೆಗೆ ಮಂಡಿಸಿದೆ.</td></tr>
<tr><td></td><td>ನಿರ್ಣಯ</td><td>1. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ<br>2. ಪ್ರೊ. ಎಂ. ಶಿವಕುಮಾರಸ್ವಾಮಿ<br>3. ಶ್ರೀ. ಯು.ಬಿ.ಉಳವಿ ಈ ಮೂವರು ತಜ್ಞರ ಸಮಿತಿಯನ್ನು ರಚಿಸಿ, ಅವರ ನಿರ್ಣಯ ಮತ್ತು ಕೇಂದ್ರ ಸರ್ಕಾರದ ಆದೇಶವನ್ನು ಸರ್ಕಾರಕ್ಕೆ ಕಳುಹಿಸಿ ಸರ್ಕಾರಿ ಆದೇಶ ಮಾಡಲು ಒತ್ತಯಿಸುವಂತೆ ಸಭೆ ನಿರ್ಣಯ ಕೈಗೊಂಡಿತು.</td></tr>
<tr><td>ವಿಷಯ 06</td><td>ವಿಷಯ ಮತ್ತು</td><td>ಪ್ರಥಮಾ ಪ್ರಸಿದ್ಧ ಪರೀಕ್ಷೆಗಳನ್ನು ನಡೆಸುವ ಬಗೆಗೆ.<br>ವಿಶ್ವವಿದ್ಯಾಲಯವು ಪ್ರಥಮಾ ಪ್ರಸಿದ್ಧ ಪರೀಕ್ಷೆಗಳನ್ನು ರದ್ದುಗೊಳಿಸಿ ಪಾಠಶಾಲೆಯ ಮಟ್ಟದಲ್ಲಿಯೇ</td></tr>
</table>

| | | |
|---|---|---|
| | ಟಿಪ್ಪಣಿ | ಪರೀಕ್ಷೆಗಳನ್ನು ನಡೆಸುವಂತೆ ಹಿಂದಿನ ಪ್ರಶಿಕ್ಷಣ ಪರಿಷತ್ ಸಭೆಯಲ್ಲಿ ವಿಷಯ ಮಂಡನೆಯಾಗಿದ್ದು ಯಾವುದೇ ತೀರ್ಮಾನ ತೆಗೆದುಕೊಳ್ಳಲಾಗಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಿರ್ಣಯ ಕೋರಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಸಂಸ್ಕೃತ ಭಾಷೆಯ ಹಿತದೃಷ್ಟಿಯಿಂದ ಪ್ರಥಮಾ ಪ್ರಸಿದ್ಧ ಪರೀಕ್ಷೆಗಳನ್ನು ರದ್ದುಗೊಳಿಸಬಾರದೆಂದು ಸಭೆಯು ತೀರ್ಮಾನಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಉತ್ತೀರ್ಣತಾ ಮಾನದಂಡ ಮತ್ತು ಶ್ರೇಣಿ ಮಾಪನ ನಿಗದಿಪಡಿಸುವ ಬಗೆಗೆ.**<br>ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾದ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಉತ್ತೀರ್ಣತಾ ಮಾನದಂಡ ಮತ್ತು ಶ್ರೇಣಿಯನ್ನು ಈವರೆಗೂ ನಿಗದಿಪಡಿಸಲಾಗಿಲ್ಲ. ಇದನ್ನು ಈ ಕೆಳಕಂಡಂತೆ ನಿಗದಿಪಡಿಸಬಹುದಾಗಿದ್ದು ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ.<br>35%–49% – ಉತ್ತೀರ್ಣ<br>50%–59% – ದ್ವಿತೀಯ ಶ್ರೇಣಿ<br>60% – ಮತ್ತು ಅಧಿಕ.. ಪ್ರಥಮ ಶ್ರೇಣಿ. |
| | ನಿರ್ಣಯ | **ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾದ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಉತ್ತೀರ್ಣತಾ ಮಾನದಂಡ ಮತ್ತು ಶ್ರೇಣಿಯನ್ನು ಒಪ್ಪಲಾಗಿದೆ.** |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ಇಲಾಖೆಯಲ್ಲಿ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾದ ಅಭ್ಯರ್ಥಿಗಳಿಗೆ ವಲಸೆ ಪ್ರಮಾಣ ಪತ್ರ ನೀಡುವ ಬಗೆಗೆ.**<br>2010–11ಕ್ಕಿಂತ ಪೂರ್ವದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ವಲಸೆ ಪ್ರಮಾಣ ಪತ್ರ ಕೋರಿರುತ್ತಾರೆ. ಇಂತಹ ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳು ವಿಶ್ವವಿದ್ಯಾಲಯದಲ್ಲಿ ಇರುವುದಿಲ್ಲ. ಆದರೆ ಇಲಾಖೆಯಿಂದ ವಿಶ್ವವಿದ್ಯಾಲಯವು ಬೇರ್ಪಟ್ಟ ಕಾರಣ ವಲಸೆ ಪ್ರಮಾಣಪತ್ರವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ನೀಡಲಾಗುತ್ತಿಲ್ಲ. ಆದ್ದರಿಂದ 2010–11ನೇ ಶೈಕ್ಷಣಿಕ ವರ್ಷದ ಪೂರ್ವದಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಲಸೆ ಪ್ರಮಾಣ ಪತ್ರ ನೀಡುವ ಕುರಿತಾಗಿ ಸ್ಪಷ್ಟ ನಿರ್ಣಯ ಕೋರಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳನ್ನು ಕೋರಿ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪತ್ರಿಸಬಹುದಾಗಿದೆ.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರುಪರೀಕ್ಷೆಗೆ ಉತ್ತೀರ್ಣವಾದ ವಿಷಯಗಳಲ್ಲಿ ವಿನಾಯಿತಿ ನೀಡುವ ಬಗೆಗೆ.**<br>ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮರುಪರೀಕ್ಷೆಗೆ ಉತ್ತೀರ್ಣವಾದ ವಿಷಯಗಳಲ್ಲಿ ವಿನಾಯಿತಿ ನೀಡಬಹುದಾಗಿದ್ದು ಸಭೆಯ ಅನುಮೋದನೆ ಕೋರಿದೆ. |
| | ನಿರ್ಣಯ | **ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮೂರು ವಿಷಯಗಳಲ್ಲಿ ಉತ್ತೀರ್ಣರಾದಲ್ಲಿ ಮರುಪರೀಕ್ಷೆಗೆ ಒಂದು ಅವಕಾಶವನ್ನು ಮಾತ್ರ ಕಲ್ಪಿಸಲು ಒಪ್ಪಲಾಗಿದೆ.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ ಪಿಎಚ್.ಡಿ ಮೌಲ್ಯಮಾಪಕರ ಗೌರವ ಸಂಭಾವನೆಯನ್ನು ನಿಗದಿಪಡಿಸುವ ಬಗೆಗೆ.**<br>ವಿಶ್ವವಿದ್ಯಾಲಯದ ಪಿಎಚ್.ಡಿ ಪ್ರಬಂಧ ಮೌಲ್ಯಮಾಪಕರ ಮತ್ತು ವಾಚಾ ಪರೀಕ್ಷಕರ ಗೌರವಸಂಭಾವನೆಯನ್ನು 1000 ರಿಂದ 2000ಕ್ಕೆ ಹೆಚ್ಚಿಸಲಾಗಿದೆ. ಇದಕ್ಕೆ ಘಟನೋತ್ತರ ಅನುಮತಿ ಕೋರಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಘಟನೋತ್ತರ ಅನುಮತಿ ನೀಡಲಾಗಿದೆ.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳ ಸ್ಥಾನೀಕರಣ ಸೌಲಭ್ಯ ನೀಡುವ ಪರಿನಿಯಮಾವಳಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳ ಸ್ಥಾನೀಕರಣ (CAS) ಸೌಲಭ್ಯ ನೀಡುವ ಕರಡು ಪರಿನಿಯಮಾವಳಿಯನ್ನು ಅನುಮೋದನೆಗಾಗಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರಿ ಪತ್ರ ಸಂಖ್ಯೆ: ಇಡಿ 383 ಯುಎನ್‌ಇ 2017, ದಿನಾಂಕ: 30.08.2018ರಂತೆ ಸದರಿ ನಿಯಮಾವಳಿಗೆ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಅನುಮೋದನೆ ನೀಡಿರುವ ಬಗ್ಗೆ ಕೂಡಲೇ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವಂತೆ ಕೋರಿರುವುದರಿಂದ ಸದರಿ ಬೋಧಕ ಹುದ್ದೆಗಳ ಸ್ಥಾನೀಕರಣ ಸೌಲಭ್ಯ ಪರಿಷ್ಕೃತ ಕರಡು ಪರಿನಿಯಮಾವಳಿಯನ್ನು ಅನುಮೋದಿಸಲು ಮಂಡಿಸಿದೆ. |
| | ನಿರ್ಣಯ | **ಯು.ಜಿ.ಸಿ ವೇತನ ಶ್ರೇಣಿಯ ಬೋಧಕ ಹುದ್ದೆಗಳ ಸ್ಥಾನೀಕರಣ ಸೌಲಭ್ಯ ಪರಿಷ್ಕೃತ ಕರಡು ಪರಿನಿಯಮಾವಳಿಯನ್ನು ಅನುಮೋದಿಸಿದೆ.** |

| | | |
|---|---|---|
| ವಿಷಯ 12 | **ವಿಷಯ ಮತ್ತು ಟಿಪ್ಪಣಿ** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ (C&R) ನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದಕ್ಕಾಗಿ **(C&R)** ನಿಯಮಗಳನ್ನು ರಚಿಸಿದ್ದು ಇದನ್ನು ಸರ್ಕಾರಕ್ಕೆ ಸಲ್ಲಿಸಿ ಒಪ್ಪಿಗೆ ಪಡೆಯಲು ಸಭೆಯ ಅನುಮೋದನೆಗೆ ಇರಿಸಿದೆ. |
| | ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ (C&R) ನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿದೆ.** |
| **ಅಧ್ಯಕ್ಷರ ಅಪ್ಪಣೆಯ ಮೇರೆಗೆ** | | |
| ವಿಷಯ ಸಂಖ್ಯೆ 01 | **ವಿಷಯ ಮತ್ತು ಟಿಪ್ಪಣಿ** | **ಡಾ. ರೇಖಾದೇವಿ ಎಸ್.ಎಚ್, ಡಾ. ಅನುಪಮಾ ಬಿ, ಡಾ. ಭಾಸ್ಕರ ಭಟ್ ಜೋಶಿ ಹಾಗೂ ಡಾ. ಪಂಡಿತಾರಾಧ್ಯ – ಇವರನ್ನು ಪಿಎಚ್.ಡಿ ಮಾರ್ಗದರ್ಶಕರಾಗಿ ಅಂಗೀಕರಿಸುವ ಬಗೆಗೆ**<br>ಮೇಲ್ಕಂಡ ವ್ಯಕ್ತಿಗಳನ್ನು ಪಿಎಚ್.ಡಿ ಮಾರ್ಗದರ್ಶಕತ್ವಕ್ಕೆ ಬೇಕಾದ ಎಲ್ಲ ಅರ್ಹತೆಗಳನ್ನು ಪಡೆದುಕೊಂಡಿದ್ದು ವಿಶ್ವವಿದ್ಯಾಲಯದಲ್ಲಿ ಹಾಗೂ ಘಟಕ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ವಿಭಾಗಾಧ್ಯಕ್ಷರು ಹಾಗೂ ನಿಕಾಯಾಧ್ಯಕ್ಷರ ಸಮಿತಿಯು ಇವರಿಗೆ ಮಾರ್ಗದರ್ಶಕತ್ವವನ್ನು ಕೊಡಬಹುದೆಂದು ಶಿಫಾರಸ್ಸು ಮಾಡಿದೆ. ಪ್ರಶಿಕ್ಷಣ ಪರಿಷತ್ತಿನ ವಿಚಾರಣಾರ್ಥವಾಗಿ ಮಂಡಿಸಿದೆ. |
| | ನಿರ್ಣಯ | **ಡಾ. ರೇಖಾದೇವಿ ಎಸ್.ಎಚ್, ಡಾ. ಅನುಪಮಾ ಬಿ, ಡಾ. ಭಾಸ್ಕರ ಭಟ್ ಜೋಶಿ ಹಾಗೂ ಡಾ. ಪಂಡಿತಾರಾಧ್ಯ – ಇವರನ್ನು ಪಿಎಚ್.ಡಿ ಮಾರ್ಗದರ್ಶಕರಾಗಿ ಅಂಗೀಕರಿಸುವುದನ್ನು ಸರ್ವಾನುಮತದಿಂದ ಒಪ್ಪಲಾಗಿದೆ.** |

**ಶ್ರೀಮತಿ ಎಂ. ಶಿಲ್ಪ, ಕ.ಆ.ಸೇ.**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು